ಇ) ಇಲಾಖೆಯಿಂದ ಬೆಳೆಸಿದ ನೆಡುತೋಪುಗಳನ್ನು ಸಾಮಾನ್ಯವಾಗಿ ನೆಟ್ಟನಂತರ 3 ರಿಂದ 5 ವರ್ಷಗಳವರೆವಿಗೂ ಪೋಷಣೆ ಮಾಡುವುದು ವಾಡಿಕೆಯಲ್ಲಿದೆ. ಈ ಅವಧಿಯ ನಂತರ ನೆಡುತೋಪುಗಳ ಪೋಷಣೆ ಮಾಡುವ ಅವಕಾಶವಿರುವುದಿಲ್ಲ. ಕೆಲವೊಂದು ವರ್ಷಗಳಲ್ಲಿ ಮಳೆ ಸರಿಯಾಗಿ ಬಾರದೆ ಇರುವುದರಿಂದಲೂ ಹಾಗೂ ಮೇವಿಗಾಗಿ ಜಾನುವಾರುಗಳ ಹಾವಳಿಯಿಂದಲೂ ಹಾಗೂ ಬೇಸಿಗೆ ಕಾಲದಲ್ಲಿ ಬೆಂಕಿಯ ಹಾವಳಿಯಿಂದಲೂ ಕೆಲವೊಂದು ಗಿಡಗಳು ನಾಶವಾಗಿರುವ ಸಂಭವ ಉಂಟು, ಆದರೆ ಯಾವುದೇ ಕಾರಣದಿಂದ ನೆಡುತೋಪುಗಳ ರಕ್ಷಣೆ ಕಾರ್ಯದಲ್ಲಿ ಇಲಾಖೆಯವತಿಯಿಂದ ನಿರ್ಲಕ್ಷತೆ ಇರುವುದಿಲ್ಲ. ಇಲಾಖೆಯಲ್ಲಿ ಅರಣ್ಯ ವೀಕ್ಷಕರು, ಅರಣ್ಯ ರಕ್ಷಕರು, ವನಪಾಲಕರು ರಕ್ಷಣಾಕಾರ್ಯದಲ್ಲಿ ನಿರಂತರವಾಗಿ ತೊಡಗಿರುತ್ತಾರೆ.

ನಿಯಮ ಉಲ್ಲಂಘನೆ

38 (456), **ಶ್ರೀ ಮಂಜುನಾಥ್. ಹೆಚ್.ಪಿ. (ಹುಣಸೂರು)**

ಪ್ರಶ್ನೆ

ಅ) ಗಿರಿಜನ ಪುನರ್‌ವಸತಿ ಯೋಜನೆಯಡಿಯಲ್ಲಿ ಮೈಸೂರು ಜಿಲ್ಲೆಯ ಬಂಡೀಪುರ ಹಾಗೂ ನಾಗರಹೊಳೆ ರಾಜೀವ್‌ಗಾಂಧಿ ರಾಷ್ಟ್ರೀಯ ಉದ್ಯಾನವನ ಕಾಡಿನಲ್ಲಿ ವಾಸಿಸುತ್ತಿದ್ದ ಗಿರಿಜನರ ಪುನರ್ ವಸತಿ ಯೋಜನೆಯಡಿಯಲ್ಲಿ 1999 ರಿಂದ ಈವರೆಗೆ ಕೇಂದ್ರ ಪುರಸ್ಕೃತ ಅನುದಾನದಲ್ಲಿ ಅನುಷ್ಠಾನ ಸಂಬಂಧ ನಡೆದಿರುವ ಕಾರ್ಯಚಟುವಟಿಕೆಗಳಲ್ಲಿ ಅರಣ್ಯ ಲೆಕ್ಕ ಸಂಹಿತೆ ಹಾಗೂ ಸಾರ್ವಜನಿಕ ಲೆಕ್ಕನಿರ್ವಹಣೆ ಮತ್ತು ತಪಾಸಣಾ ನಿಯಮಾವಳಿಗಳ ಉಲ್ಲಂಘನೆಯಾಗಿದ್ದು, ಈ ಬಗ್ಗೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಸಮಗ್ರವಾಗಿ ಅವಲೋಕಿಸಿ, ಪರಿಶೀಲಿಸಿ, ಸಂಬಂಧಪಟ್ಟವರಿಂದ ವಿವರಣೆ ಪಡೆದು ಕ್ರಮವಾಗಿ ಸರ್ಕಾರಕ್ಕೆ ಸಲ್ಲಿಸಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಬಂದಿದ್ದಲ್ಲಿ ಪೂರ್ಣ ವಿವರ ನೀಡುವುದು) ;

ಆ) ಹಾಗಿದ್ದಲ್ಲಿ, ಸಾಕಷ್ಟು ಸಭೆಗಳು ನಡೆದು ಚರ್ಚಿಸಿ ಅಂಗೀಕರಿಸಿದ ನಿರ್ಣಯಗಳನ್ನು ಜಾರಿಗೆ ತರದೆ ಉಪೇಕ್ಷೆ ಮಾಡಿದ್ದು, ಸದರಿ ವರದಿಯ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಸಿ.ಪಿ.ಯೋಗೇಶ್ವರ (ಮಾನ್ಯ ಅರಣ್ಯ ಸಚಿವರು)

ಉತ್ತರ

ಅ) ರಾಜೀವ್‌ಗಾಂಧಿ ರಾಷ್ಟ್ರೀಯ ಉದ್ಯಾನವನದ (ನಾಗರಹೊಳೆ) ಕಾಡಿನಲ್ಲಿ ವಾಸಿಸುತ್ತಿದ್ದ ಗಿರಿಜನರ ಪುನರ್ವಸತಿ ಯೋಜನೆ ಯಡಿಯಲ್ಲಿ 1999 ರಿಂದ ಈವರೆಗೆ ಕೇಂದ್ರ ಪುರಸ್ಕೃತ ಅನುದಾನದಲ್ಲಿ ಅನುಷ್ಠಾನ ಸಂಬಂಧ ಗಿರಿಜನ ಕುಟುಂಬಗಳನ್ನು ಪುನರ್ವಸತಿಗೊಳಿಸಲು ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಒಂದು ಕುಟುಂಬಕ್ಕೆ ರೂ.100 ಲಕ್ಷಗಳ ಪ್ಯಾಕೇಜ್ ನಿಗಧಿಪಡಿಸಿದ್ದು ಅದರಲ್ಲಿ ಮನೆ ನಿರ್ಮಾಣಕ್ಕೆ ರೂ.0.36 ಲಕ್ಷಗಳು ನಿಗಧಿಪಡಿಸಲಾಗಿರುತ್ತದೆ. 225 ಮನೆಗಳನ್ನು (ಶೆಟ್ಟಿಹಳ್ಳಿ-ಲಕ್ಕಪಟ್ಟಣದಲ್ಲಿ 195 ಮತ್ತು ನಾಗಾಪುರ ಘಟಕ-6 ರಲ್ಲಿ 30 ಮನೆಗಳು) ನಿರ್ಮಿಸಲು ಮೆ॥ ಮೈಸೂರು ನಿರ್ಮಿತಿ ಕೇಂದ್ರ, ಮೈಸೂರು (ಕರ್ನಾಟಕ ಸರ್ಕಾರದ ಪ್ರಮಾಣಿತ ಸಂಸ್ಥೆ)ರವರಿಂದ ರೂ.0.38 ಲಕ್ಷಗಳಂತೆ ನಿರ್ಮಿಸಲು ದಿನಾಂಕ: 27/12/2004 ರಂದು ಕರಾರು ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ. ಅದರಲ್ಲಿ 30 ಮನೆಗಳನ್ನು ನಾಗಾಪುರ ಘಟಕ-6ರಲ್ಲಿ ಪ್ರತಿ ಮನೆಗೆ ರೂ.0.38 ಲಕ್ಷಗಳಂತೆ ನಿರ್ಮಿಸಿರುತ್ತಾರೆ. ಮನೆ ಸಾಮಾಗ್ರಿಗಳ ಬೆಲೆ ಹೆಚ್ಚಾಗಿದ್ದರಿಂದ ಒಂದು ಮನೆ ನಿರ್ಮಿಸಲು ರೂ.0.38 ಲಕ್ಷಗಳು ಸಾಧ್ಯವಾಗುವುದಿಲ್ಲವೆಂದು ಹೆಚ್ಚಿನ ಮೊತ್ತ ಪಾವತಿಸಬೇಕೆಂದು ಮೆ॥ ಮೈಸೂರು ನಿರ್ಮಿತಿ ಕೇಂದ್ರ, ಮೈಸೂರುರವರು ಕೋರಿಕೊಂಡ ಮೇರೆಗೆ ಒಂದು ಮನೆ ನಿರ್ಮಿಸಲು ರೂ.0.48 ಲಕ್ಷಗಳ ವೆಚ್ಚಕ್ಕೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ) ಬೆಂಗಳೂರುರ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ/ಡಿ1/ ಡಬ್ಲ್ಯೂಎಲ್/ಸಿಆರ್- 5/2006-07,ದಿನಾಂಕ: 04/02/2008 ರಲ್ಲಿ ಅನುಮೋದನೆ ನೀಡುತ್ತಾ ಸದರಿ ವೆಚ್ಚವನ್ನು ರೂ.1.00 ಲಕ್ಷಗಳ ಪ್ಯಾಕೇಜಿನ ಮಿತಿಯಲ್ಲಿ ಭರಿಸಲು ಆದೇಶಿಸಿರುತ್ತಾರೆ. ಒಂದು ಮನೆ ನಿರ್ಮಾಣಕ್ಕೆ ರೂ.0.38ಲಕ್ಷಗಳಿಂದ ರೂ.0.48 ಲಕ್ಷಗಳಿಗೆ ಹೆಚ್ಚು ಮಾಡಿದ್ದರ ಬಗ್ಗೆ ಹಾಗೂ ರೂ.46,10,184.00 ಗಳನ್ನು ಮುಂಗಡವಾಗಿ ಮೆ॥ ಮೈಸೂರು ನಿರ್ಮಿತಿ ಕೇಂದ್ರ, ಮೈಸೂರುರವರಿಗೆ ಪಾವತಿಸಿರುವ ಬಗ್ಗೆ ಮಾಹಾಲೇಖಪಾಲರುರವರು ಅರಣ್ಯ ಸಂರಕ್ಷಾಧಿಕಾರಿ ಮತ್ತು ನಿರ್ದೇಶಕರು, ರಾಜೀವ್‌ಗಾಂಧಿ ರಾಷ್ಟ್ರೀಯ ಉದ್ಯಾನವನ, ಹುಣಸೂರು ಕಛೇರಿಯ ತಪಾಸಣೆಯಲ್ಲಿ PARA-I/IIA/20062008 ಅಕ್ಷೇಪಿಸಿರುತ್ತಾರೆ. ಮುಂದು-ವರಿದಂತೆ ಮೆ॥ ಮೈಸೂರು ನಿರ್ಮಿತಿ ಕೇಂದ್ರ, ಮೈಸೂರು ರೂ.0.48 ಲಕ್ಷಗಳಲ್ಲಿ ಯಾವುದೇ ಮನೆಗಳನ್ನು ನಿರ್ಮಿಸಿರುವುದಿಲ್ಲ. ಹಾಗೂ ಸದರಿಯವರಿಗೆ

ನೀಡಲಾದ ಮುಂಗಡವನ್ನು ಮುಂದಿನ ವೆಚ್ಚಗಳಲ್ಲಿ ಸರಿದೂಗಿಸುವುದಾಗಿ ಮಹಾಲೇಖಪಾಲರಿಗೆ ಉತ್ತರವನ್ನು ಸಲ್ಲಿಸಲಾಗಿರುತ್ತದೆ. ಗಿರಿಜನ ಕುಟುಂಬಗಳ ಪುನರ್ವಸತಿ ಕಾರ್ಯವು ಒಂದು ಕ್ಲಿಷ್ಟಕರ ಪ್ರಕ್ರಿಯೆಯಾಗಿದ್ದು, ಅದರಲ್ಲೂ ಮುಖ್ಯವಾಗಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಿಂದ ಮಾಡಲಾಗುತ್ತಿರುವ ಪ್ರಕ್ರಿಯೆಯು ಕಳೆದ 10 ವರ್ಷಗಳಿಂದ ಜಾರಿಯಲ್ಲಿದ್ದು, ಕಾಲಕಾಲಕ್ಕೆ ಜಾರಿಯಲ್ಲಿರುವ ಮಾರ್ಗಸೂಚಿ-ಗಳಲ್ಲದೇ ಹಲವಾರು ಸರ್ಕಾರೇತರ ಸಂಘ ಸಂಸ್ಥೆಗಳು ಈ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುವುದರಿಂದ ಒಟ್ಟಾರೆ ಸಮಸ್ಯೆಯು ಕಾಲಕಾಲಕ್ಕೆ ಮಾರ್ಪಡುಗೊಳ್ಳುತ್ತಲೇ ಇರುವುದಾಗಿದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಹಾಗೂ ವಸ್ತುಸ್ಥಿತಿಯನ್ನು ಆಧರಿಸಿ ಆಕ್ಷೇಪಣೆ ಕೈಬಿಡಲು ಮಹಾಲೇಖಪಾಲರಿಗೆ ಸೂಕ್ತ ಉತ್ತರವನ್ನು ಸಲ್ಲಿಸಲಾಗುತ್ತದೆ. ಸದರಿ ಪ್ರಕರಣವು ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ಮುಂದೆ ಬಂದಿರುವುದಿಲ್ಲ.

ಆ) ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಗಿರಿಜನರ ಪುನರ್ವಸತಿಯ ಕುರಿತಾಗಿ ಮೈಸೂರು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸರ್ಕಾರದ ಆದೇಶದಂತೆ ರಚಿತವಾದ ಸಮಿತಿಯು ಕೈಗೊಳ್ಳುವ ನಿರ್ಧಾರದ ಮೇಲೆಯೇ ಎಲ್ಲಾ ಕಾರ್ಯಗಳನ್ನು ಅನುಷ್ಠಾನಗೊಳಿಸಲಾಗುತಿದ್ದು, ಸಮಿತಿಯ ಯಾವುದೇ ನಿರ್ಣಯಗಳನ್ನು ಉಪೇಕ್ಷೆ ಮಾಡಲಾಗಿರುವುದಿಲ್ಲ.

ಧನ ಸಹಾಯ ಮಂಜೂರಾತಿ

36 (516), **ಶ್ರೀ ಕುಮಾರಸ್ವಾಮಿ ಹೆಚ್.ಕೆ.(ಸಕಲೇಶಪುರ)**

ಪ್ರಶ್ನೆ

ಅ) ರಾಜ್ಯದಲ್ಲಿ ಪರಿಶಿಷ್ಟ ಜಾತಿ ನಿರುದ್ಯೋಗಿಗಳು ಮತ್ತು ಮಹಿಳೆಯರು ಸಹಾಯಧನ ನೀರೀಕ್ಷಿಸಿ ಸಣ್ಣ ಕೈಗಾರಿಕೆಗಳನ್ನು ನಡೆಸುತ್ತಿರುವುದು ನಿಜವೇ?

ಆ) ಕಳೆದ ನಾಲ್ಕು ವರ್ಷಗಳಲ್ಲಿ ಸಹಾಯಧನಕ್ಕೆ ಅರ್ಹರಾದ ಈ ಫಲಾನುಭವಿಗಳ ಸಂಖ್ಯೆ ಎಷ್ಟು?

ಇ) ಹಾಸನ ಕೈಗಾರಿಕಾ ಬೆಳವಣಿಗೆ ಕೇಂದ್ರದಲ್ಲಿ ಫಲಾನುಭವಿಗಳು ಕೈಗಾರಿಕೆ ನಡೆಸುತ್ತಿದ್ದು, ಇದುವರೆವಿಗೂ ಸಹಾಯಧನ ಬಿಡುಗಡೆ-ಯಾಗದಿರುವುದು ನಿಜವೇ?

ಈ)ಹಾಗಿದ್ದಲ್ಲಿ ಸಹಾಯಧನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು (ಮಾಹಿತಿ ನೀಡುವುದು);